ಸಾಕ್ಷಿಯನ್ನು ದಿನಾಂಕ **10-03-2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲುಃ **2**ನೇ ಎದುರುದಾರರ ಪರ ವಕೀಲರಿಂದಃ-

ಅಪಘಾತವಾದ ಸಮಯದಲ್ಲಿ 55 ವರ್ಷ ವಯಸ್ಸಾಗಿತ್ತು ಎಂದು ತೋರಿಸುವ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ನನಗೆ 55 ವರ್ಷ ವಯಸ್ಸಾಗಿತ್ತು ಎಂದು ಹೆಚ್ಚಿಗೆ ಪರಿಹಾರ ಧನ ಪಡೆಯುವ ಉದ್ದೇಶದಿಂದ ಕಡಿಮೆ ವಯಸ್ಸನ್ನು ಬರೆಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ವೈದ್ಯರು ನನ್ನ ವಯಸ್ಸನ್ನು 70 ವರ್ಷ ಎಂದು ನಮೂದಿಸಿದ್ದಾರೆ ಎಂದರೆ ಸಾಕ್ಷಿ ತಪ್ಪು ನಮೂದಿಸಿದ್ದಾರೆ ಎಂದು ಹೇಳುತ್ತಾರೆ. ನಾನು ಹಾಜರುಪಡಿಸಿದಂತಹ ಆನಲೈನ್ ಆದಾಯ ತೆರಿಗೆ ಪ್ರತಿಗಳಲ್ಲಿ ನನ್ನ ಜನ್ಮ ದಿನಾಂಕ 24-03-1959 ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ಅದರಲ್ಲಿ ಸಹ ತಪ್ಪು ನಮೂದಾಗಿದೆ ಎಂದು ಹೇಳುತ್ತಾರೆ. ನನ್ನ ನಿಜವಾದ ಜನ್ಮ ದಿನಾಂಕ 01-07-1965 ಇರುತ್ತದೆ. ನನ್ನ ಜನ್ಮ ದಿನಾಂಕ

01-07-1965 ಎಂದು ತೋರಿಸುವ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೇನೆ. ನಿಪಿ-6 ರಲ್ಲಿ ಸಹ ನನ್ನ ವಯಸ್ಸು 70 ವರ್ಷ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ಅದು ತಪ್ಪಾಗಿ ನಮೂದಾಗಿದೆ ಎಂದು ಹೇಳುತ್ತಾರೆ. ಪೋಲಿಸರು ಸಲ್ಲಿಸಿರುವ ದೋಷಾರೋಪಣಾ ಪಟ್ಟಿಯನ್ನು ನಾನು ನೋಡಿದ್ದೇನೆ. ಅದರಲ್ಲಿ ನನ್ನನ್ನು 2ನೇ ಆರೋಪಿಯನ್ನಾಗಿ ತೋರಿಸಿದ್ದಾರೆ ಎಂದರೆ ಸಾಕ್ಷಿ ಮಾಡಿರಬಹುದು ಎಂದು ಹೇಳುತ್ತಾರೆ. ಅಪಘಾತವಾದ ದಿನಾಂಕದಂದು ನನಗೆ ವಾಹನ ಚಾಲನಾ ಪರವಾನಿಗೆ ಇರಲಿಲ್ಲ ಮತ್ತು ಹೆಲ್ಮೆಟ್ ಹಾಕಿರಲಿಲ್ಲ ಎಂದು ನನ್ನ ವಿರುದ್ಧ ಪೋಲಿಸರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ನನ್ನ ವಿರುದ್ಧ ದಾಖಲಿಸಿದ ಪ್ರಕರಣದಲ್ಲಿ ನಾನು ತಪ್ಪೊಪ್ಪಿಕೊಂಡು ದಂಡ ತುಂಬಿರುತ್ತೇನೆ ಎಂದರೆ ನನಗೆ ನೆನಪಿಲ್ಲ.

ಅಪಘಾತದ ದಿನಾಂಕದಂದು ನಾನು ಮುಧೋಳ ರಸ್ತೆಯಲ್ಲಿರುವ ಗೋಶಾಲೆಗೆ ಹೋಗುತ್ತಿದ್ದೆ. ಆ ದಿನ ನಾನು ದ್ವಿಚಕ್ರ ವಾಹನದ ಮೇಲೆ ಹೋಗುವಾಗ ನಾನಾಗಿಯೇ ಬಿದ್ದು ಗಾಯಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಚಾಲನಾ ಪರವಾನಿಗೆ ಇರಲಿಲ್ಲ, ನನಗೆ ಪರಿಹಾರ ಧನ ಬರುವುದಿಲ್ಲ ಎಂದು ತಿಳಿದು ಕೆಎ-28 ಜಡ್-3591 ರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನನ್ನನ್ನು ಸನದಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಸದರಿ ಆಸ್ಪತ್ರೆಯಲ್ಲಿ ಯಾವ ರೀತಿಯಾಗಿ ಗಾಯಗಳು ಆಗಿವೆ ಎಂದು ವೈದ್ಯಾಧಿಕಾರಿಗಳು ವಿಚಾರಿಸಿದ್ದರ ಬಗ್ಗೆ ನನಗೆ ನೆನಪಿಲ್ಲ. ಪೋಲಿಸರು ಪ್ರಥಮ ವರ್ತಮಾನ ಹೇಳಿಕೆ ಪಡೆಯಲು ಆಸ್ಪತ್ರೆಗೆ ಬಂದಿದ್ದರು. ಅಪಘಾತವಾದ ದಿನ ಪೋಲಿಸರು ಆಸ್ಪತ್ರೆಗೆ ಬಂದಿದ್ದರು. ಅದೇ ದಿನ ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೆ ಎಂದರೆ ಸಾಕ್ಷಿ ಪ್ರಥಮ ವರ್ತಮಾನ ಹೇಳಿಕೆ ಕೊಟ್ಟ 4-5 ದಿನಗಳ ನಂತರ ಪೋಲಿಸರು ಬಂದಿದ್ದರು ಎಂದು ಹೇಳುತ್ತಾರೆ. ನಾನು ಸನದಿ ಆಸ್ಪತ್ರೆಯಲ್ಲಿ 4 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿಂದ ಬಿಡುಗಡೆ ಹೊಂದಿ ಬೆಳಗಾವಿಯ ಕೆಎಲ್ಇ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ಬೆಳಗಾವಿಯ ಕೆಎಲ್ಇ ಆಸ್ಪತ್ರೆಯಲ್ಲಿ ನಾನು 20 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗಾಗಿ ಐದು ಲಕ್ಷದ ಐವತ್ತು ಸಾವಿರ ರೂಪಾಯಿ ಖರ್ಚು ಮಾಡಿದ್ದೇನೆ ಎಂದು ತೋರಿಸುವ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಜೊತೆ ಆಸ್ಪತ್ರೆಯಲ್ಲಿ ಇದ್ದಂತಹ ಸಹಾಯಕರಿಗೆ

ದಿನಕ್ಕೆ 500 ರೂಪಾಯಿಗಳು ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಬಲಗಾಲಿನ 3 ಮತ್ತು 4ನೇ ಬೆರಳುಗಳು ಕಟ್ಟಾಗಿದ್ದರಿಂದ ಪ್ಲಾಸ್ಟಿಕ್ ಸರ್ಜರಿ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಿಕಿತ್ಸೆಗಾಗಿ 2 ಲಕ್ಷ ರೂಪಾಯಿಗಳು ಖರ್ಚಾಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ಒಂದು ಲಕ್ಷ ರೂಪಾಯಿಗಳು ಬೇಕಾಗುತ್ತವೆ ಎಂದು ತೋರಿಸುವ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

ನಿಪಿ-7 ಮತ್ತು ನಿಪಿ-8 ಗಳನ್ನು ನಾನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೂ ಮೊದಲು ನಾನು ಬಂಗಾರದ ವ್ಯಾಪಾರ ಮಾಡುತ್ತಿದ್ದೆ ಎಂದು ತೋರಿಸುವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಮ್ಮ ಬಂಗಾರದ ಅಂಗಡಿ ಈಗ ನಡೆಯುತ್ತಿದೆ ಎಂದರೆ ಸರಿ. ನಾನು ಮತ್ತು ನನ್ನ ಮಗ ಸೇರಿ ಸದರಿ ಅಂಗಡಿಯನ್ನು ನಡೆಸುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮಗ ಬೇರೆ ವಾಸವಾಗಿದ್ದಾನೆ ಎಂದು ಹೇಳುತ್ತಾರೆ. ನನ್ನ ತಪ್ಪಿನಿಂದ ಅಪಘಾತವಾಗಿದ್ದರೂ ಸಹ ಪರಿಹಾರ ಧನ ಬರಲಿ ಎಂದು ಸುಳ್ಳು ದಾಖಲಾತಿಗಳನ್ನು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:- ಏನೂ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಸಹಿ/-
ಸದಸ್ಯರು ಮೋ.ವಾ.ಅ. ಮಂಡಳಿ-5,
ಜಮಖಂಡಿ.